


بسم اللهِ الرّحمٰنِ الرّحيم

# ಹಝ್ರತ್ ಮುಹಮ್ಮದ್ ಪೈಗಂಬರ್(ಸ)ರ ಉನ್ನತ ನೈತಿಕತೆ ಮತ್ತು ಆದರ್ಶ ಜೀವನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19-12-2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಓದಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಸೂರತುಲ್ ಅಹ್‌ಝಾಬಿನ 22ನೇ ವಚನವನ್ನು ಪಠಿಸಿ ಅದರ ಅನುವಾದವನ್ನು ವಿವರಿಸಿದರು:)*

ನಿಸ್ಸಂದೇಹವಾಗಿಯೂ ನಿಮಗೆ ಅಲ್ಲಾಹನ ಸಂದೇಶವಾಹಕನಲ್ಲಿ ಒಂದು ಉತ್ತಮವಾದ ಮಾದರಿ ಇದೆ – ಇದು ಅಲ್ಲಾಹ್ ಮತ್ತು ಅಂತ್ಯದಿನದ ಭೇಟಿಯ ಬಗ್ಗೆ ನಿರೀಕ್ಷೆಯಿರುವವರಿಗೆ ಹಾಗೂ ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವವರಿಗೆ ಆಗಿದೆ.

(ಹುಝೂರ್ ಹೇಳಿದರು:) ಒಮ್ಮೆ ಹಝ್ರತ್ ಆಯಿಶ(ರ)ರ ಬಳಿ ಒಬ್ಬರು ಬಂದು ಹಝ್ರತ್ ಪೈಗಂಬರ್(ಸ)ರ ಉನ್ನತ ನೈತಿಕತೆ ಮತ್ತು ಆದರ್ಶಗಳ ಬಗ್ಗೆ ಕೇಳಿದಾಗ, ಅವರು ಹೀಗೆ ಉತ್ತರಿಸಿದರು: ನೀವು ಪವಿತ್ರ ಖುರ್‌ಆನ್ ಓದಿಲ್ಲವೇ? ಅದರಲ್ಲಿ ಅಲ್ಲಾಹನೇ ಅವರ ಆದರ್ಶಗಳ ಬಗ್ಗೆ ಸಾಕ್ಷಿ ನೀಡಿದ್ದಾನೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ: **ವ ಇನ್ನಕ ಲಅಲಾ ಖುಲುಕಿನ್ ಅಝೀಮ್** ಅಂದರೆ, ಪ್ರವಾದಿಯೇ, ನೀವು ಖಂಡಿತವಾಗಿಯೂ ಅತ್ಯುನ್ನತ ನೈತಿಕತೆಯ ಪದವಿಯಲ್ಲಿ ಇದ್ದೀರಿ.

ಯಾವುದೇ ವಿಷಯದಲ್ಲಿ ಅತ್ಯುನ್ನತ ಸ್ಥಾನದಲ್ಲಿ ಇರುವವರನ್ನೇ ನಾವು ಮಾದರಿಯನ್ನಾಗಿ ಸ್ವೀಕರಿಸುತ್ತೇವೆ. ಹಝ್ರತ್ ಪೈಗಂಬರ್(ಸ)ರ ವಿಷಯಕ್ಕೆ ಬರುವುದಾದರೆ, ಅಲ್ಲಾಹನ ಹಕ್ಕುಗಳ ವಿಷಯವಿರಲಿ ಅಥವಾ ಮನುಷ್ಯರ ಹಕ್ಕುಗಳ ವಿಷಯವಿರಲಿ, ಎರಡರಲ್ಲೂ ಹಝ್ರತ್ ಪೈಗಂಬರ್(ಸ) ಅತ್ಯುನ್ನತ ಸ್ಥಾನದಲ್ಲಿದ್ದರು ಎಂಬುದಕ್ಕೆ ಅಲ್ಲಾಹನೇ ಸಾಕ್ಷಿಯಾಗಿದ್ದಾನೆ. ಆದ್ದರಿಂದಲೇ ಅಲ್ಲಾಹನು ನಮ್ಮೊಡನೆ ಈ ಪ್ರವಾದಿಯು ನಿಮಗೆ ಒಂದು ಉತ್ತಮ ಮಾದರಿ ಆಗಿರುವರು ಎಂದು ಹೇಳಿರುವನು. ಅವರ ಮಾತುಗಳನ್ನು ಕೇಳುವುದು ಮಾತ್ರವಲ್ಲ, ಅವುಗಳನ್ನು ಪಾಲಿಸಬೇಕಾಗುವುದು; ಕೇವಲ ನಂಬಿಕೆ ಇಟ್ಟರೆ ಸಾಲದು, ನೀವು ಅದರಂತೆ ನಡೆದರೆ ಮಾತ್ರ ನಾನು ಈ ಪ್ರವಾದಿಯನ್ನು ಯಾವ ಉದ್ದೇಶಕ್ಕಾಗಿ ಕಳುಹಿಸಿದ್ದೇನೋ ಆ ಉನ್ನತ ಸ್ಥಾನವನ್ನು ನಿಮಗೆ ಪಡೆಯಲು ಸಾಧ್ಯವಾಗುವುದು. ಇದಾಗಿದೆ ಹಝ್ರತ್ ಪೈಗಂಬರ್(ಸ)ರ ಸ್ಥಾನ. ಹಝ್ರತ್ ಪೈಗಂಬರ್(ಸ) ಸ್ವತಃ ಹೀಗೆ ಹೇಳಿದ್ದಾರೆ: ನನ್ನ ಮಾದರಿಯನ್ನು, ಜೀವನಶೈಲಿಯನ್ನು ಅನುಸರಿಸಿರಿ, ನನ್ನ ನಡೆವಳಿಕೆ ಪ್ರಕಾರ ನಡೆಯಿರಿ. ಏಕೆಂದರೆ ನಿಮ್ಮನ್ನು ಸುಧಾರಿಸಲಿಕ್ಕಾಗಿಯೇ ಅಲ್ಲಾಹನು ನನ್ನನ್ನು ಕಳುಹಿಸಿದ್ದಾನೆ. ಉನ್ನತ ನೈತಿಕ ಗುಣಗಳನ್ನು ಪೂರ್ಣಗೊಳಿಸಲಿಕ್ಕಾಗಿ ನಾನು ಕಳುಹಿಸಲ್ಪಟ್ಟಿದ್ದೇನೆ. ಆದುದರಿಂದ, ಯಾರಲ್ಲಿ ಈ ಎಲ್ಲ ಸದ್ಗುಣಗಳಿವೆಯೋ ಅವರಿಗೆ ಮಾತ್ರ ನೈತಿಕತೆಯನ್ನು ಪೂರ್ಣಗೊಳಿಸಲು ಸಾಧ್ಯ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ)ರ ಖುರ್‌ಆನ್ ವ್ಯಾಖ್ಯಾನದ ಪೀಠಿಕೆಯಲ್ಲಿ ಮತ್ತು ಹಝ್ರತ್ ಪೈಗಂಬರ್(ಸ)ರ ಜೀವನ ಚರಿತ್ರೆ ಬರೆಯಲ್ಪಟ್ಟ ನಮ್ಮ ಗ್ರಂಥಗಳಲ್ಲಿ ಪೈಗಂಬರರ(ಸ) ನೈತಿಕತೆಯ ಬಗ್ಗೆ ಸಾಕಷ್ಟು ವಿವರಿಸಲಾಗಿದೆ. ಅವುಗಳಲ್ಲಿ ಕೆಲವನ್ನು ನಾನು ಇಂದು ಸಂಕ್ಷಿಪ್ತವಾಗಿ ಪ್ರಸ್ತಾಪಿಸುತ್ತೇನೆ.

ಮೊದಲನೆಯದಾಗಿ ಅಲ್ಲಾಹನ ಆರಾಧನೆಯ ಹಕ್ಕು. ನಮಗೆ ಹಝ್ರತ್ ಪೈಗಂಬರ್(ಸ)ರ ಜೀವನದಲ್ಲಿ ಅಲ್ಲಾಹನ ಆರಾಧನೆಯ ಬಗ್ಗೆ ಎಂತಹ ಮಾದರಿ ಇದೆ ಎಂದು ನೋಡುವಾಗ ಅವರ ಇಡೀ ಜೀವನವು ದೇವಪ್ರೇಮದಲ್ಲಿ ಮುಳುಗಿತ್ತು ಎಂಬುದನ್ನು ಕಾಣುತ್ತೇವೆ. ಹೊಸ ಶರಿಯತ್ ಜಾರಿಗೊಳಿಸುವುದು ಮತ್ತು ಜನರ ತರಬೇತಿಯಂತಹ ಬೃಹತ್ ಜವಾಬ್ದಾರಿಗಳು ಅವರ ಮೇಲಿದ್ದರೂ, ಅವರು ಅಲ್ಲಾಹನ ಆರಾಧನೆಯ ಹಕ್ಕನ್ನು ಎಂದಿಗೂ ಮರೆಯಲಿಲ್ಲ. ಇದು ಬಹಳ ದೊಡ್ಡ ಮತ್ತು ಮುಖ್ಯವಾದ ವಿಷಯವಾಗಿದೆ. ಹಝ್ರತ್ ಪೈಗಂಬರ್(ಸ)ರಿಗೆ ಅನೇಕ ಕಷ್ಟಗಳು ಎದುರಾಗಿದ್ದುವು, ಯುದ್ಧಗಳನ್ನು ಮಾಡಲುಬೇಕಾಗಿ ಬಂದಿತ್ತು, ವೈರಿಗಳು ದಾಳಿಗಳನ್ನು ಕೂಡ ಮಾಡುತ್ತಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ತಮ್ಮ ಆರಾಧನೆಯಲ್ಲಿ ಎಂದಿಗೂ ಕೊರತೆ ಮಾಡಲಿಲ್ಲ. ಈ ಮಾದರಿ ನಮ್ಮ ಮುಂದಿದೆ. ನಾವು ಪ್ರತಿ

ಸಂದರ್ಭದಲ್ಲೂ ಅಲ್ಲಾಹನನ್ನು ನಮ್ಮ ಮುಂದೆ ಇರಿಸಿಕೊಂಡರೆ, ನಮ್ಮ ಅನೇಕ ಸಮಸ್ಯೆಗಳು ತಾನಾಗಿಯೇ ಪರಿಹಾರವಾಗುತ್ತವೆ. ಜನರು ತಮ್ಮ ಸಮಸ್ಯೆಗಳಿಗಾಗಿ ಪ್ರಾರ್ಥಿಸುತ್ತಾರೆ; ಆದರೆ ಅಲ್ಲಾಹನ ಹಕ್ಕನ್ನು ಸಲ್ಲಿಸುವುದಿಲ್ಲ, ಆದ್ದರಿಂದಲೇ ಮನುಷ್ಯನು ಅನುಗ್ರಹಗಳಿಂದ ವಂಚಿತನಾಗುತ್ತಾನೆ.

ಹಝ್ರತ್ ಪೈಗಂಬರ್(ಸ)ರ ಆರಾಧನೆಯ ಉನ್ನತ ಮಟ್ಟ ಏನಾಗಿತ್ತು ಎಂದು ನೋಡಿರಿ. ಮಧ್ಯರಾತ್ರಿ ಕಳೆದ ನಂತರ ಹಝ್ರತ್ ಪೈಗಂಬರ್(ಸ) ಎದ್ದು ಅಲ್ಲಾಹನ ಆರಾಧನೆಗಾಗಿ ನಿಲ್ಲುತ್ತಿದ್ದರು. ಇದಕ್ಕೆ ಅಲ್ಲಾಹನೇ ಸಾಕ್ಷ್ಯವಹಿಸಿದ್ದಾನೆ. ಅಲ್ಲಾಹನ ವಚನಗಳನ್ನು ಕೇಳುವಾಗ ಅವರ ಕಣ್ಣುಗಳಿಂದ ಅನಿಯಂತ್ರಿತವಾಗಿ ಕಣ್ಣೀರು ಸುರಿಯುತ್ತಿತ್ತು ಎಂದು ಅವರ ಜೀವನಚರಿತ್ರೆಯ ಘಟನೆಯಿಂದ ತಿಳಿದುಬರುತ್ತದೆ. ವಿಶೇಷವಾಗಿ ಅವರ ಜವಾಬ್ದಾರಿಗಳನ್ನು ನೆನಪಿಸುವ ವಚನಗಳನ್ನು ಆಲಿಸುವಾಗ ಅವರು ಹೆಚ್ಚು ಭಾವುಕರಾಗುತ್ತಿದ್ದರು. ಒಮ್ಮೆ ಹಝ್ರತ್ ಪೈಗಂಬರ್(ಸ)ರ ಅಪ್ಪಣೆಯಂತೆ ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಸೂರತುನ್ನಿಸಾ ಪಠಿಸುತ್ತಾ, 'ಪ್ರತಿಯೊಂದು ಸಮುದಾಯದ ಪ್ರವಾದಿಯನ್ನು ಅವರವರ ಸಮುದಾಯದ ಸಾಕ್ಷಿಯಾಗಿ ನಿಲ್ಲಿಸಿ ನಾವು ಲೆಕ್ಕ ಕೇಳುವಾಗ ಮತ್ತು ನಿನ್ನನ್ನೂ ನಿನ್ನ ಸಮುದಾಯದ ಮೇಲೆ ಸಾಕ್ಷಿಯನ್ನಾಗಿ ನಿಲ್ಲಿಸಿ ಲೆಕ್ಕ ಕೇಳುವಾಗ ನಿನ್ನ ಸ್ಥಿತಿ ಏನಾಗಿರಬಹುದು?' ಎಂಬ ವಚನಕ್ಕೆ ಬಂದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: 'ಸಾಕು, ನಿಲ್ಲಿಸು.' ಆಗ ಅವರ ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಸುರಿಯುತ್ತಿತ್ತು ಎಂದು ಸಹಾಬಿ ಹೇಳುತ್ತಾರೆ. ಅವರಿಗೆ ತಮ್ಮ ಸಮುದಾಯದ ಬಗ್ಗೆ ಎಂತಹ ಕಳಕಳಿಯಿತ್ತೆಂದರೆ, ನನ್ನ ಸಮುದಾಯವು ಅಲ್ಲಾಹನ ಅಸಮಾಧಾನಕ್ಕೆ ಗುರಿಯಾಗುವಂತಹ ಯಾವುದೇ ಕೆಲಸ ಮಾಡಿಕೊಂಡು ನಾನು ಅವರ ವಿರುದ್ಧ ಸಾಕ್ಷಿ ಹೇಳುವಂತಾಗದಿರಲಿ ಎಂಬ ಭಯ ಅವರಲ್ಲಿತ್ತು.

ಹಝ್ರತ್ ಪೈಗಂಬರ್(ಸ)ರ ನಮಾಝಿನ ನಿರ್ವಹಣೆಯನ್ನು ನೋಡುವುದಾದರೆ, ಅವರಿಗೆ ನಮಾಝಿನ ಬಗ್ಗೆ ಎಷ್ಟು ಕಾಳಜಿಯಿತ್ತೆಂದರೆ, ತೀವ್ರ ಅನಾರೋಗ್ಯದ ಸ್ಥಿತಿಯಲ್ಲಿದ್ದಾಗಲೂ ಜನರ ಹೆಗಲ ಮೇಲೆ ಕೈಯಿಟ್ಟು ಮಸೀದಿಗೆ ಹೋಗುತ್ತಿದ್ದರು ಎಂದು ಚರಿತ್ರೆಯಲ್ಲಿ ಬರೆಯಲಾಗಿದೆ. ಆದರೆ ಹಝ್ರತ್ ಪೈಗಂಬರ್(ಸ) ಆರಾಧನೆಯಲ್ಲಿ ಅನಗತ್ಯವಾಗಿ ಕಷ್ಟಪಡುವುದನ್ನು ಇಷ್ಟಪಡುತ್ತಿರಲಿಲ್ಲ. 'ಮನಸ್ಸಿನಲ್ಲಿ ಉತ್ಸಾಹ ಇರುವವರೆಗೆ ಮಾತ್ರ ಆರಾಧನೆ ಮಾಡಬೇಕು, ಸುಸ್ತಾದಾಗ ಕುಳಿತುಕೊಳ್ಳಬೇಕು' ಎಂದೂ 'ಔಪಚಾರಿಕವಾಗಿ ಮಾಡುವ ಆರಾಧನೆಯಿಂದ ಯಾವುದೇ ಪ್ರಯೋಜನವಿಲ್ಲ' ಎಂದೂ ಅವರು ಹೇಳುತ್ತಿದ್ದರು.

(ಹುಝೂರ್ ಹೇಳಿದರು:) ಇಂದು ಕೆಲವರು 'ಕಷ್ಟಪಡುವುದು ಬೇಡ' ಎಂಬ ಮಾತನ್ನು ತಪ್ಪಾಗಿ ಅರ್ಥೈಸಿ ನಮಾಝನ್ನು ತರಾತುರಿಯಲ್ಲಿ ಮುಗಿಸುತ್ತಾರೆ. ನಮಾಝನ್ನು ಯಾವಾಗಲೂ ಸಮಾಧಾನದಿಂದ ನಿಧಾನವಾಗಿ ನಿರ್ವಹಿಸಬೇಕು.

ಅಲ್ಲಾಹನ ಸನ್ನಿಧಿಯಲ್ಲಿ ಹಝ್ರತ್ ಪೈಗಂಬರ್(ಸ)ರ ವಿನಮ್ರತೆ ಎಂತಹ ಮಟ್ಟದ್ದಾಗಿತ್ತೆಂದರೆ, ಒಮ್ಮೆ ಜನರು ಅವರೊಡನೆ ಹೀಗೆ ಹೇಳಿದರು: 'ನೀವು ನಿಮ್ಮ ಸತ್ಕರ್ಮಗಳ ಬಲದಿಂದ ಅಲ್ಲಾಹನ ಅನುಗ್ರಹವನ್ನು ಗಳಿಸುವಿರಿ, ಅಲ್ಲಾಹನು ನಿಮಗೆ ಅದರ ಪ್ರಮಾಣಪತ್ರವನ್ನೇ ನೀಡಿದ್ದಾನೆ ಮತ್ತು ನಿಮ್ಮ ಮಾದರಿ ಮುಸ್ಲಿಮರಿಗೆ ಕಾರ್ಯರೂಪದ ಮಾನದಂಡವಾಗಿದೆ ಎಂದು ಘೋಷಿಸಿದ್ದಾನೆ.' ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: 'ಹಾಗಲ್ಲ, ನಾನು ಕೂಡ ಅಲ್ಲಾಹನ ಕೃಪೆಯಿಂದ ಮಾತ್ರ ಕ್ಷಮಿಸಲ್ಪಡುವೆನು'

ಅನಂತರ ಹಝ್ರತ್ ಪೈಗಂಬರ್(ಸ) ಹೀಗೆ ಉಪದೇಶಿಸಿದರು: 'ಸತ್ಕಾರ್ಯಗಳನ್ನು ಮಾಡಿರಿ ಮತ್ತು ಅಲ್ಲಾಹನ ಸಾಮೀಪ್ಯವನ್ನು ಪಡೆಯುವ ಮಾರ್ಗಗಳನ್ನು ಹುಡುಕಿರಿ. ನಿಮ್ಮಲ್ಲಿ ಯಾರೂ ಮರಣವನ್ನು ಬಯಸಬೇಡಿರಿ. ಒಂದು ವೇಳೆ ಆತ ಒಳ್ಳೆಯವನಾಗಿದ್ದರೆ, ಬದುಕಿರುವ ಮೂಲಕ ಆತ ತನ್ನ ಪುಣ್ಯ ಕಾರ್ಯಗಳನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಬಹುದು. ಅಥವಾ ಆತ ಕೆಟ್ಟವನಾಗಿದ್ದರೆ, ಬದುಕಿರುವ ಮೂಲಕ ಆತನಿಗೆ ತನ್ನ ಪಾಪಗಳಿಂದ ಪಶ್ಚಾತ್ತಾಪ ಪಡಲು ಅವಕಾಶ ಸಿಗಬಹುದು. ಇದು ಬಹಳ ಮುಖ್ಯವಾದ ಉಪದೇಶವಾಗಿದ್ದು, ನಾವು ಎಂದಿಗೂ ಸಾವನ್ನು ಬಯಸಬಾರದು ಎಂಬುದನ್ನು ನೆನಪಿಟ್ಟುಕೊಳ್ಳಬೇಕು.

ಹಝ್ರತ್ ಪೈಗಂಬರ್(ಸ) ಕಾರ್ಯ ನಿರ್ವಹಣೆಗಳ ಬಗ್ಗೆ ಹಝ್ರತ್ ಆಯಿಶ(ರ) ಹೀಗೆ ಹೇಳುತ್ತಾರೆ: 'ಹಝ್ರತ್ ಪೈಗಂಬರ್(ಸ)ರ ಮುಂದೆ ಯಾವುದಾದರೂ ವಿಷಯಕ್ಕೆ ಸಂಬಂಧಿಸಿ ಎರಡು ದಾರಿಗಳಿದ್ದರೆ ಅವರು ಯಾವಾಗಲೂ ಸುಲಭವಾದ ಮಾರ್ಗವನ್ನೇ ಆರಿಸಿಕೊಳ್ಳುತ್ತಿದ್ದರು. ಆದರೆ ಅದರಲ್ಲಿ ಪಾಪದ ಕಿಂಚಿತ್ತೂ ಅಂಶವಿಲ್ಲವೆಂಬುದನ್ನು ಮಾತ್ರ ಖಚಿತಪಡಿಸುತ್ತಿದ್ದರು.

ಮಾನವಕುಲದೊಂದಿಗಿನ ವ್ಯವಹಾರಗಳ ಬಗ್ಗೆ ಹೇಳುವುದಾದರೆ, ಮೊದಲು ಅವರ ಮನೆಯಿಂದಲೇ ಪ್ರಾರಂಭಿಸಬಹುದು. ಪತ್ನಿಯರ ಹಕ್ಕುಗಳ ವಿಷಯದಲ್ಲಿ ಅವರ ವರ್ತನೆ ಅತ್ಯಂತ ಕರುಣಾಮಯಿ ಮತ್ತು

ನ್ಯಾಯಯುತವಾಗಿತ್ತು. ಇಂದಿನ ಜನರು ಇದನ್ನು ಅರ್ಥಮಾಡಿಕೊಂಡರೆ, ಮನೆಗಳಲ್ಲಿ ನಡೆಯುವ ಅನೇಕ ಜಗಳಗಳು ಮತ್ತು ಅಶಾಂತಿಗಳು ದೂರವಾಗುವುವು.

ಅವರ ಸಹನೆ ಮತ್ತು ತಾಳ್ಮೆ ಹೇಗಿತ್ತೆಂದರೆ, ಅಲ್ಲಾಹನು ಹಝ್ರ‌ತ್ ಪೈಗಂಬರ್(ಸ)ರಿಗೆ ಅಧಿಕಾರವನ್ನು ನೀಡಿದಾಗಲೂ ಅವರು ಪ್ರತಿಯೊಬ್ಬರ ಮಾತನ್ನು ಆಲಿಸುತ್ತಿದ್ದರು. ಯಾರಾದರೂ ಕಠಿಣವಾಗಿ ಮಾತನಾಡಿದರೂ ಅವರು ಮೌನವಾಗಿ ಆಲಿಸುತ್ತಿದ್ದರು. ಕೆಲವೊಮ್ಮೆ ಜನರು ಹಝ್ರ‌ತ್ ಪೈಗಂಬರ್(ಸ)ರನ್ನು ದಾರಿಯಲ್ಲಿ ತಡೆದು ನಿಲ್ಲಿಸಿ ತಮ್ಮ ಅಗತ್ಯಗಳನ್ನು ವಿವರಿಸಲು ತೊಡಗುತ್ತಿದ್ದರು. ಆ ವ್ಯಕ್ತಿಯು ತನ್ನ ಮಾತು ಮುಗಿಸುವವರೆಗೆ ಹಝ್ರ‌ತ್ ಪೈಗಂಬರ್(ಸ) ಅಲ್ಲೇ ನಿಂತಿರುತ್ತಿದ್ದರು, ಅನಂತರ ಮುಂದಕ್ಕೆ ಹೋಗುತ್ತಿದ್ದರು.

(ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್(ಸ)ರ ಜೀವನದಲ್ಲಿ ನ್ಯಾಯ, ಭಾವನೆಗಳಿಗೆ ಗೌರವ ಮತ್ತು ಬಡವರ ಕಾಳಜಿಯ ಬಗ್ಗೆ ಇಂತಹ ಇನ್ನೂ ಅನೇಕ ವಿಷಯಗಳಿವೆ, ಅವೆಲ್ಲವೂ ನಮಗೆ ಮಾದರಿಗಳಾಗಿವೆ. ಹಝ್ರತ್ ಪೈಗಂಬರ್(ಸ)ರ ಮಾದರಿಗಳನ್ನು ಪಾಲಿಸುವ ಮೂಲಕ ನಿಜವಾದ ಮುಸ್ಲಿಮರಾಗಲು ಪ್ರಯತ್ನಿಸುವ ಸೌಭಾಗ್ಯವನ್ನು ಅಲ್ಲಾಹನು ನಮಗೆ ನೀಡಲಿ. ಹಝ್ರತ್ ಪೈಗಂಬರ್(ಸ)ರ ಈ ಸಂದೇಶವನ್ನು ಲೋಕಕ್ಕೆ ತಲುಪಿಸುವವರಾಗಲಿ ಮತ್ತು ಇಡೀ ಲೋಕವನ್ನು ಹಝ್ರತ್ ಪೈಗಂಬರ್(ಸ)ರ ಧ್ವಜದ ಅಡಿಯಲ್ಲಿ ತರುವ ಸೌಭಾಗ್ಯ ನಮಗೆ ಲಭಿಸಲಿ. ಅಲ್ಲಾಹನು ನಮಗೆ ಈ ಸೌಭಾಗ್ಯವನ್ನು ನೀಡಲಿ. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್**.

(ಖುತ್ಬದ ಕೊನೆಯಲ್ಲಿ ಹುಝೂರ್ ಇಬ್ಬರು ದಿವಂಗತರ ಜನಾಝ ನಮಾಝನ್ನು ನಿರ್ವಹಿಸುವುದಾಗಿ ಹೇಳಿದರು ಮತ್ತು ಅವರ ಬಗ್ಗೆ ಪ್ರಸ್ತಾಪಿಸಿ ಅವರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.)

————————————*****————————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***
At, ***'Masjid Mubarak',*** *Islamabad, Tilford,* U.K. On 19-12-2025
**Summarized by** *Majlis Ansarullah Bharat*
***Kannada Translation:*** Moulavi Inamullah for Kannada Desk, Qadian
***Reviewed by:*** M.P Ibrahim | ***Layout:*** Basheer K.P. Manjeshwar
***Published By:*** Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon